# ‘ಎಂಟ್ರಿ ಕೊಟ್ಟಿದ್ದೇ ಮಲತಾಯಿ ಪಾತ್ರದಲ್ಲಿ

**ರೇಖಾ ಕುಮಾರ್**
ಉದಯದ ‘ಸಿಂಧು ಭೈರವಿ’ ವಸುಂಧರಾ ರಾಜ್ ಬಹದ್ದೂರ್

■ ರಾಘವೇಂದ್ರ ಕೆ.



◆ **‘ಸಿಂಧು ಭೈರವಿ’ಯ ವಸುಂಧರಾ ಪಾತ್ರವನ್ನು ಹೇಗೆ ಅನುಭವಿಸುತ್ತಿದ್ದೀರಿ?**

ರಕ್ತಗತವಾಗಿ ಬಂದ ಶ್ರೀಮಂತಿಕೆಯಿಂದ ಮೆರೆಯುತ್ತಿರುತ್ತಾಳೆ. ವಸುಂಧರಾ ಅಹಂನಿಂದ ಅನೇಕ ತಪ್ಪುಗಳನ್ನೂ ಮಾಡುತ್ತಾಳೆ. ಆಕೆಗೆ ತನ್ನ ಆಸೆಯನ್ನು ಈಡೇರಿಸಿಕೊಳ್ಳುವುದೇ ಮುಖ್ಯ ಆಗಿರುತ್ತದೆ. ತನ್ನ ಮಕ್ಕಳಿಗಾಗಿ ಏನಾದರೂ ಮಾಡಲು ಸಿದ್ಧ ಎನ್ನುವ ನಿಲುವು ಆಕೆಯದು. ಆಕೆಗೆ ಮಧ್ಯಮ ವರ್ಗದವರನ್ನು ಕಂಡರೆ ಅಷ್ಟಕ್ಕಷ್ಟೆ. ಮಕ್ಕಳು ಮಧ್ಯಮ ವರ್ಗದ ಹುಡುಗಿಯರನ್ನು ಪ್ರೀತಿಸುವುದು ಇಷ್ಟ ಆಗಲ್ಲ. ಸಿಂಧು ಸುಳ್ಳು ಹೇಳಿ ಸೊಸೆಯಾಗಿ ಬರುತ್ತಾಳೆ. ಅವಳ ಜೊತೆ ಸಂಘರ್ಷ ಉಂಟಾಗುತ್ತದೆ.

ಈ ಪಾತ್ರದೊಳಗೆ ಪ್ರವೇಶ ಮಾಡಿದ್ದೇನೆ. ಯಾವ ಪಾತ್ರ ಸಿಗುತ್ತದೆಯೋ ಅದಕ್ಕೆ ನಾವೇ ಸಿದ್ಧತೆ ಮಾಡಿಕೊಳ್ಳಬೇಕು. ಅಭಿನಯಿಸಲು ಸಾಕಷ್ಟು ಅವಕಾಶವನ್ನು ಇದು ಮಾಡಿಕೊಟ್ಟಿದೆ. ವಸ್ತ್ರಾಭರಣ, ಅಲಂಕಾರ ಸಾಮಾನ್ಯವಾಗಿ ಮಹಿಳೆಯರಿಗೆ ಇಷ್ಟ. ಆ ಆಸೆಯನ್ನು ಇಲ್ಲಿ ಈಡೇರಿಸಿಕೊಳ್ಳುತ್ತಿದ್ದೇನೆ ಎನ್ನುವುದು ಇಷ್ಟ ಆಗುತ್ತಿದೆ. ಅದು ಖುಷಿ ಕೊಡುತ್ತದೆ.

◆ **ಕಿರುತೆರೆಯಲ್ಲಿ ಆದ ಬೆಳವಣಿಗೆಯನ್ನು ಹೇಗೆ ನೋಡುತ್ತೀರಿ?**

ವೃತ್ತಿಯ ಆರಂಭದಲ್ಲಿ ಒಂದು ಕಂತಿಗೆ 12–13 ಗಂಟೆ ಚಿತ್ರೀಕರಣ ಮಾಡುತ್ತಿದ್ದೆವು. ಬೆಳಿಗ್ಗೆ ಶುರುವಾದರೆ ರಾತ್ರಿ ಎಷ್ಟು ಹೊತ್ತಿಗೆ ಮುಗಿಯುತ್ತಿತ್ತೋ ಗೊತ್ತಿಲ್ಲ. ಈಗ ಎರಡು ಮೂರು ಕಂತನ್ನು ಅದಕ್ಕಿಂತ ಕಡಿಮೆ ಅವಧಿಯಲ್ಲಿ ಮಾಡುತ್ತೇವೆ. ಸನ್ನಿವೇಶದ ಆಳಕ್ಕೆ ಇಳಿಯಲು ಮೊದಲಿನಷ್ಟು ಆದ್ಯತೆ ಈಗಿಲ್ಲ. ಕೆಲವು ಸಂದರ್ಭ ಯಾಂತ್ರಿಕವಾಗಿ ಸಾಗುತ್ತದೆ. ಇವತ್ತಿನ ತಂತ್ರಜ್ಞಾನವೂ ಅದಕ್ಕೆ ಪೂರಕವಾಗಿದೆ. ಇದಕ್ಕೆಲ್ಲ ಹಣಕಾಸಿನ ವಿಷಯವೇ ಮುಖ್ಯ ಆಗುತ್ತದೆ. ಆಗಿನ ದಿನಗಳಿಗೆ ಹೋಲಿಸಿದರೆ ಇಂದು ಕೆಲಸದ ವೇಗ ಹೆಚ್ಚಿದೆ. ದೃಶ್ಯವನ್ನು ಮುಗಿಸುವುದು ಸವಾಲಾಗಿರುತ್ತದೆ. ರಾತ್ರಿಯ ದೃಶ್ಯವೊಂದನ್ನು ನಿರ್ವಹಿಸಿ ಬೆಳಗಿನ ಸನ್ನಿವೇಶವನ್ನು ಆ ಕ್ಷಣವೇ ಎದುರಿಸುತ್ತೇವೆ. ಅಂದರೆ, ಮೇಕಪ್‌ಗೂ ಸಮಯ ಇರಲ್ಲ. ಕಾಸ್ಟ್ಯೂಮ್ ಬದಲಿಸಲೂ ಆಗುವುದಿಲ್ಲ. ಹಾಗಾಗಿಯೇ ಮಲಗುವ ಸಂದರ್ಭದಲ್ಲೂ ದುಬಾರಿ ಸೀರೆ–ಅಲಂಕಾರದಲ್ಲಿ ಕಾಣಿಸುತ್ತೇವೆ. ಅದೆಲ್ಲ ಅನಿವಾರ್ಯ ಕೂಡ.

◆ **ನಟನೆಯ ಪ್ಯಾಶನ್ ಹುಟ್ಟಿದ್ದು ಹೇಗೆ?**

ಇದಕ್ಕಾಗಿ ಯಾವುದೇ ತಯಾರಿಯನ್ನು ಮಾಡಿಕೊಂಡಿಲ್ಲ. ನಿರೀಕ್ಷೆ ಕೂಡ ಇರಲಿಲ್ಲ. ನನಗೆ ಡಾನ್ಸ್ ಕೂಡ ಬರುತ್ತಿರಲಿಲ್ಲ. ನನ್ನ ಅಕ್ಕ ರಂಗಭೂಮಿ ಕಲಾವಿದೆ. ಅಕ್ಕನ ಗೆಳತಿ ನಟನೆಯನ್ನು ಮಾಡಲು ಪ್ರೇರೇಪಿಸಿದರು. ನಾನಾಗ ಪಿಯು ಓದುತ್ತಿದ್ದೆ. ಅವರು ಹೇಳಿದಾಗ ಭವಿಷ್ಯದ ಬಗ್ಗೆ ಯೋಚನೆ ಬಂತು. ಇದನ್ನೊಮ್ಮೆ ನೋಡುವ ಎನ್ನುವ ಮನಸಾಯಿತು. ಅವರೇ ನಿರ್ದೇಶಕರೊಬ್ಬರನ್ನು ಪರಿಚಯಿಸಿದರು. ಒಂದು ಅವಕಾಶವೂ ಸಿಕ್ಕಿತು. ಮೊದಲ ಪಾತ್ರವೇ ಮಲತಾಯಿಯಾಗಿ ನಟಿಸಬೇಕಿತ್ತು. ಏನೂ ಗೊತ್ತಿರಲಿಲ್ಲ. ಒಪ್ಪಿಕೊಂಡು ಮಾಡಿದೆ, ನನ್ನ ಅಭಿನಯ ನಮ್ಮ ತಂಡಕ್ಕೂ ಇಷ್ಟ ಆಯಿತು. ಪರಿಣತ ಸಹನಟರಿಂದಲೇ ಕಲಿತದ್ದು ಹೆಚ್ಚು. ಪ್ರಸಿದ್ಧ ನಿರ್ದೇಶಕರ ಜೊತೆ ಪಳಗಿದ್ದರಿಂದ ನಟನೆಯ ತತ್ವವನ್ನು ತಿಳಿದುಕೊಳ್ಳಲು ಸಹಾಯವಾಯಿತು.

◆ **ಆರಂಭದ ಮೊದಲ ಪಾತ್ರ ಹೇಗೆ ನಿಭಾಯಿಸಿದಿರಿ?**

ಅದು ಎರಡನೇ ಹೆಂಡತಿಯ ಪಾತ್ರ. ಮಲಮಗು ಬೇರೆ ಇತ್ತು. ಮುಕ್ತ ಮನಸ್ಸಿನಿಂದ ಪಾತ್ರದೊಳಗೆ ಪ್ರವೇಶ ಮಾಡಿದೆ. ನಿರ್ದೇಶಕರ ಸೂಚನೆಯಂತೆ ನಟಿಸುತ್ತಿದ್ದೆ. ಆ ಸಮಯದಲ್ಲಿ ನಟನೆ ಮಾಡುತ್ತಿದ್ದೇನೆ ಎಂದು ಅನ್ನಿಸಿರಲಿಲ್ಲ. ಈಗ ಅಂತಹ ಪಾತ್ರವನ್ನು ಮಾಡಿದ್ದಾ ಎಂದು ಅನ್ನಿಸುತ್ತದೆ. ಆಗ ನನಗೆ ಮಾರ್ಗದರ್ಶನ ನೀಡಲು ಕಿರುತೆರೆಯಲ್ಲಿ ಪರಿಚಿತರು ಯಾರೂ ಇರಲಿಲ್ಲ. ನಮ್ಮ ಕುಟುಂಬದಲ್ಲಿ ನಟನೆಯನ್ನು ವೃತ್ತಿಯಾಗಿ ತೆಗೆದುಕೊಂಡಿದ್ದು, ನಾನೇ ಮೊದಲು. ■